ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಚೇರಿ, ಹೊಸ ಸಾರ್ವಜನಿಕ ಕಟ್ಟಡಗಳು,
ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು – 560001

ಸಂಖ್ಯೆ: ಶಿ.ವಾ.ರವಾನೆ 01/2018-19 ದಿನಾಂಕ: 01-02-2019

**ಸುತ್ತೋಲೆ**

**ವಿಷಯ : ಶಿಕ್ಷಣವಾರ್ತೆ ಪ್ರತಿಗಳನ್ನು ಸೂಚಿತ ಸ್ಥಳಗಳಿಗೆ ಸಕಾಲದಲ್ಲಿ ಸಮರ್ಪಕವಾಗಿ ತಲುಪಿಸುವ ಬಗ್ಗೆ.**

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಶಿಕ್ಷಣವಾರ್ತೆ ಶೈಕ್ಷಣಿಕ ಮಾಸಪತ್ರಿಕೆಯನ್ನು ಕ್ಷೇತ್ರ ಸಂಪನ್ಮೂಲ ಕೇಂದ್ರಗಳ ಮೂಲಕ ತಮ್ಮ ಕಛೇರಿಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ, ಗ್ರಾಮ ಪಂಚಾಯತಿಗಳಿಗೆ, ತಾಲ್ಲೂಕು ಪಂಚಾಯಿತಿಗಳಿಗೆ, ಜಿಲ್ಲಾ ಪಂಚಾಯಿತಿಗಳಿಗೆ, ಡಿ.ಡಿ.ಪಿ.ಐ., ಡಯಟ್, ಸಿ.ಟಿ.ಇ ಮತ್ತು ಎ.ಸಿ.ಪಿ.ಐ. ಕಛೇರಿಗಳಿಗೆ ತಲುಪಿಸಿ, ಸ್ವೀಕೃತಿಯಾದ ಬಗ್ಗೆ ನಿಗದಿತ ನಮೂನೆಯಲ್ಲಿನ ಸೂಕ್ತ ಕಾಲಂನಲ್ಲಿ **"ತಲುಪಿಸಿದೆ "** ಎಂದು ಭರ್ತಿ ಮಾಡಿ ತಮ್ಮ ವ್ಯಾಪ್ತಿಯಲ್ಲಿಲ್ಲದ ಕಛೇರಿಗಳಿಗೆ **"ಅನ್ವಯಿಸುವುದಿಲ್ಲ"** ಎಂದು ಭರ್ತಿ ಮಾಡಿ ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳ ಸಹಿ ಪಡೆದು ಸ್ಕ್ಯಾನ್ ಮಾಡಿ shikshanavarthe@gmail.com ಗೆ ಮೇಲ್ ಮಾಡಲು ತಿಳಿಸಲಾಗಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಶಾಲೆಗಳಿಗೆ ಮತ್ತು ತಮ್ಮ ವ್ಯಾಪ್ತಿಯಲ್ಲಿ ಬರುವ ಕಚೇರಿಗಳಿಗೆ ಶಿಕ್ಷಣವಾರ್ತೆ ತಲುಪದ ಬಗ್ಗೆ ಹಲವು ದೂರುಗಳು ಆಯುಕ್ತರ ಗಮನಕ್ಕೆ ಬಂದಿದ್ದು ತುರ್ತು ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಬಿ.ಆರ್.ಸಿ.ಗಳು ಶಿಕ್ಷಣವಾರ್ತೆ ಮಾಸ ಪತ್ರಿಕೆಯು ಕೇಂದ್ರಕ್ಕೆ ತಲುಪಿದ 3 ದಿನಗಳ ಒಳಗಾಗಿ ಶಾಲೆಗಳಿಗೆ ಮತ್ತು ತಮ್ಮ ವ್ಯಾಪ್ತಿಯಲ್ಲಿ ಬರುವ ಕಚೇರಿಗಳಿಗೆ ಶಿಕ್ಷಣವಾರ್ತೆ ಪತ್ರಿಕೆಯನ್ನು ತಲುಪಿಸಿ ಸ್ವೀಕೃತಿಯಾದ ಬಗ್ಗೆ ನಿಗದಿತ ನಮೂನೆಯನ್ನು ಭರ್ತಿ ಮಾಡಿ, ಸ್ಕ್ಯಾನ್ ಮಾಡಿ shikshanavarthe@gmail.com ಗೆ ಕಡ್ಡಾಯವಾಗಿ ಮೇಲ್ ಮಾಡಲು ತಿಳಿಸಿದೆ.

J. [signature]
ಸಹನಿರ್ದೇಶಕರು( ಶಾಲಾ ಶಿಕ್ಷಣ)

ಪ್ರತಿಯನ್ನು

1. ಅಪರ ಆಯುಕ್ತರು, ಅಪರ ಆಯುಕ್ತರ ಕಛೇರಿ ಧಾರವಾಡ ಮತ್ತು ಬೆಳಗಾಂ, ಇವರಿಗೆ ಮಾಹಿತಿಗಾಗಿ
2. ರಾಜ್ಯದ ಎಲ್ಲಾ ಸಿಟಿಇ ಗಳಿಗೆ ಮಾಹಿತಿಗಾಗಿ
3. ವಿಭಾಗೀಯ ಸಹನಿರ್ದೇಶಕರು, ಬೆಂಗಳೂರು, ಮೈಸೂರು, ಧಾರವಾಡ ಮತ್ತು ಬೆಳಗಾಂ ಇವರಿಗೆ ಮಾಹಿತಿಗಾಗಿ
4. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ), ಇವರಿಗೆ ಮಾಹಿತಿಗಾಗಿ
5. ರಾಜ್ಯದ ಎಲ್ಲಾ ಉಪನಿರ್ದೇಶಕರು(ಅಭಿವೃದ್ಧಿ), ಇವರಿಗೆ ಮಾಹಿತಿಗಾಗಿ
6. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಇವರಿಗೆ ಮಾಹಿತಿಗಾಗಿ
7. ರಾಜ್ಯದ ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳಿಗೆ, ಅಗತ್ಯ ಕ್ರಮಕ್ಕಾಗಿ
8. ಕಛೇರಿ ಪ್ರತಿ

## ಭರ್ತಿ ಮಾಡಿ ಕಳುಹಿಸಬೇಕಾದ ನಮೂನೆ

## ಶಿಕ್ಷಣವಾರ್ತೆ ಪತ್ರಿಕೆಯನ್ನು ವಿತರಿಸಿರುವ ದೃಢೀಕರಣ ನಮೂನೆ

ಜಿಲ್ಲೆ: ...............................................

ತಾಲ್ಲೂಕು ........................................... ತಿಂಗಳು...........................................

ತಾಲ್ಲೂಕಿಗೆ ಸರಬರಾಜಾಗಿರುವ ಪ್ರತಿಗಳ ಒಟ್ಟು ಸಂಖ್ಯೆ:

ವಿತರಣಾ ವಿವರ

| ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲೆಗಳು | ಬಿಇಓ &ಬಿಆರ್‌ಸಿಗೆ ತಲಾ ಎರಡು | ಕ್ಲಸ್ಟರ್ ತಲಾ ಒಂದರಂತೆ | ಗ್ರಾಮಪಂ ಚಾಯ್ತಿಗಳಿಗೆ ತಲಾ ಒಂದರಂತೆ | ತಾಲ್ಲೂಕು ಪಂಚಾಯ್ತಿಗೆ ತಲಾ ಎರಡರಂತೆ | ಜಿಲ್ಲಾ ಪಂಚಾಯ್ತಿಗೆ ತಲಾ ಎರಡರಂತೆ | ಡಿಡಿಪಿಐ/ಡಿವೈಪಿಸಿ ಕಛೇರಿಗೆ ತಲಾ ಹತ್ತು | ಡಯಟ್‌ಗೆ ತಲಾ ಐದು | ಸಿಟಿಇಗೆ ತಲಾ ಐದು | ಎಸಿಪಿಐ ಕಛೇರಿಗೆ ತಲಾ ಇಪ್ಪತ್ತು |
|---|---|---|---|---|---|---|---|---|---|
| | | | | | | | | | |

ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳು